# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,

ನವನಗರ, ಹುಬ್ಬಳ್ಳಿ-580 025

☏/ಫ್ಯಾಕ್ಸ್: 0836-2323151, 2222391


ಸಂ:ಕರಾಕಾವಿವಿ/ಪ.ವಿಭಾಗ/ಘಟಿಕೋತ್ಸವ/2018-19/ ದಿನಾಂಕ: 19-01-2019

## -: ಅಧಿಸೂಚನೆ :-

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು 2019 ನೇ ಮಾಹೆಯಲ್ಲಿ ಜರುಗಿಸಲಾಗುವುದು. ಈ ಘಟಿಕೋತ್ಸವದಲ್ಲಿ ಜೂನ್ 2011 ರಿಂದ ಜೂನ್ 2018 ರ ವರೆಗೆ ಎಲ್ಲ ವಿಷಯಗಳ ಕಾನೂನು ಪದವಿ/ ಸ್ನಾತಕೋತ್ತರ ಕಾನೂನು ಪದವಿ/ ಸ್ನಾತಕೋತ್ತರ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪದವಿಗಳನ್ನು ಪ್ರಧಾನ ಮಾಡಲಾಗುವುದು. **ಘಟಿಕೋತ್ಸವದ ನಿಗದಿತ ದಿನಾಂಕ ಹಾಗೂ ವೇಳೆಯನ್ನು ನಂತರ ಪ್ರಕಟಿಸಲಾಗುವುದು.**

ಘಟಿಕೋತ್ಸವದ ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲತಾಣ **www.kslu.ac.in** ದಿಂದ ಪಡೆದುಕೊಳ್ಳಬಹುದು. ಅಂತಿಮ ವರ್ಷದ ಅಂಕಪಟ್ಟಿಯಲ್ಲಿರುವಂತೆ ತಮ್ಮ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸ್ಪಷ್ಟವಾಗಿ ಬರೆಯಬೇಕು.

**ಕುಲಪತಿಗಳ ಆದೇಶದ ಮೇರೆಗೆ ನಿಗದಿತ ದಿನಾಂಕವನ್ನು ಮುಂದುವರೆಸಿದ್ದು ರೂ. 650/- ದಂಡದೊಂದಿಗೆ (Online-Payment) ದಿನಾಂಕ: 31.01.2019 ರೊಳಗಾಗಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರಿಗೆ ತಲುಪುವಂತೆ ಕಳುಹಿಸಬೇಕು.** ಮಾಹಿತಿಗಳನ್ನು ಪೂರ್ತಿಯಾಗಿ ಭರ್ತಿ ಮಾಡಿ ದೃಡೀಕೃತ ದಾಖಲಾತಿಗಳೊಂದಿಗೆ ಘಟಿಕೋತ್ಸವ ಅರ್ಜಿಯನ್ನು ಶುಲ್ಕದ ಪಾವತಿಯೊಂದಿಗೆ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ಅವಧಿ ಮುಗಿದ ನಂತರ ತಲುಪಿದ ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಜೂನ್ 2011 ರಿಂದ 2018 ರ ಜೂನ್ ಮಾಹೆಯವರೆಗೆ ಕೆಳಗೆ ನಮೂದಿಸಿದ ಪದವಿ/ ಡಿಪ್ಲೋಮಾ/ ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಪದವಿಯನ್ನು ಸ್ವೀಕರಿಸಲು ಅರ್ಹರಿರುತ್ತಾರೆ.

ಅ) ಕಾನೂನು ಪದವೀಧರರು
ಆ) ಸ್ನಾತಕೋತ್ತರ ಪದವಿದರರು
ಇ) ಸ್ನಾತಕೋತ್ತರ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸಿನ ಅಭ್ಯರ್ಥಿಗಳು

ಖುದ್ದಾಗಿ ಪದವಿ ಪ್ರಧಾನಕ್ಕೆ ಅರ್ಜಿ ಸಲ್ಲಿಸಿ ಘಟಿಕೋತ್ಸವದಲ್ಲಿ ಭಾಗವಹಿಸದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಅನುಪಸ್ಥಿತಿ (IN ABSENTIA) ಹೆಚ್ಚಿನ ವೆಚ್ಚ ರೂ. 750/- ಗಳನ್ನು ಭರಿಸಬೇಕು. ಆಗ ಮಾತ್ರ ಪದವಿ ಪ್ರಮಾಣ ಪತ್ರವನ್ನು ಅಂಚೆ ಮೂಲಕ ರವಾನೆ ಮಾಡಲಾಗುವುದು.

ಅಂಚೆ ಮೂಲಕ ಪದವಿ ಪ್ರಮಾಣ ಪತ್ರ ಪಡೆಯಲು ನೊಂದಣಿ ಮಾಡಿದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಮುಗಿದ ನಂತರ ತ್ವರಿತ ಅಂಚೆ (Speed Post) ಸೇವೆಯ ಮೂಲಕ ಅವರು ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ಪದವಿ ಪ್ರಮಾಣ ಪತ್ರವನ್ನು ಕಳುಹಿಸಲಾಗುವುದು. ಮುಂದುವರೆದು, ಪದವಿ ಪ್ರಮಾಣ ಪತ್ರದಲ್ಲಿ ಯಾವುದೇ ತಿದ್ದುಪಡಿಯಿದ್ದಲ್ಲಿ ಪ್ರಮಾಣ ಪತ್ರ ತಲುಪಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಮಾಣ ಪತ್ರವನ್ನು ಅನ್ವಯಿತ ಶುಲ್ಕದೊಂದಿಗೆ ತಿದ್ದುಪಡಿಗಾಗಿ ಖುದ್ದಾಗಿ/ ಅಂಚೆಯ ಮೂಲಕ ಸಲ್ಲಿಸುವುದು.

**ಘಟಿಕೋತ್ಸವಕ್ಕೆ ಉಪಸ್ಥಿತವಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ವಿವರಗಳು ಈ ಕೆಳಗಿನಂತಿವೆ:**

| ಕ್ರ.ಸಂ. | ಕೋರ್ಸ್ | ಅರ್ಜಿಯ ಶುಲ್ಕ | ಉಪಸ್ಥಿತ | ಒಟ್ಟು (ಮೊತ್ತ) |
|---|---|---|---|---|
| 1 | ಕಾನೂನು ಪದವೀಧರರು (3 yr LL.B, 5 Yr B.A LL.B, 5 Yr B.B.A LL.B & B.B.A LL.B HON'S) | 275 | 1320 | 1595 |
| 2 | ಎಲ್ಲ ಸ್ನಾತಕೋತ್ತರ ಪದವೀಧರರು | 275 | 1320 | 1595 |
| 3 | ಎಲ್ಲ ಸ್ನಾತಕೋತ್ತರ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳ ಅಭ್ಯರ್ಥಿಗಳು | 275 | 1100 | 1375 |

**ಘಟಿಕೋತ್ಸವಕ್ಕೆ ಅನುಪಸ್ಥಿತವಾಗಿ ಅರ್ಜಿ ಸಲ್ಲಿಸಿ, ಸರ್ಟಿಫಿಕೇಟ ಪಡೆಯುವ ಅಭ್ಯರ್ಥಿಗಳಿಗೆ ವಿವರಗಳು ಈ ಕೆಳಗಿನಂತಿವೆ:**

| ಕ್ರ.ಸಂ. | ಕೋರ್ಸ್ | ಅರ್ಜಿಯ ಶುಲ್ಕ | ಅನುಪಸ್ಥಿತ | ಒಟ್ಟು (ಮೊತ್ತ) |
|---|---|---|---|---|
| 1 | ಕಾನೂನು ಪದವೀಧರರು (3 yr LL.B, 5 Yr B.A LL.B, 5 Yr B.B.A LL.B & B.B.A LL.B HON'S)) | 275 | 2035 | 2310 |
| 2 | ಎಲ್ಲ ಸ್ನಾತಕೋತ್ತರ ಪದವೀಧರರು | 275 | 2035 | 2310 |
| 3 | ಎಲ್ಲ ಸ್ನಾತಕೋತ್ತರ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳ ಅಭ್ಯರ್ಥಿಗಳು | 275 | 1320 | 1595 |

**ಎಲ್ಲ ವಿದೇಶಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವದ ಅರ್ಜಿಯ ವಿವರಗಳು ಈ ಕೆಳಗಿನಂತಿವೆ**

| ಕ್ರ.ಸಂ. | ಕೋರ್ಸ್ | ಒಟ್ಟು (ಮೊತ್ತ) |
|---|---|---|
| **1** | ಎಲ್ಲ ವಿದೇಶಿ ಕಾನೂನು ಪದವೀಧರರು | **237 (USD)** |
| **2** | ಎಲ್ಲ ವಿದೇಶಿ ಸ್ನಾತಕೋತ್ತರ ಪದವಿದರರು | **237 (USD)** |

**ಸೂಚನೆ:**

- ಈಗಾಗಲೇ 4 ನೇ ವಾರ್ಷಿಕ ಘಟಿಕೋತ್ಸವಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಮುಂಬರುವ ಘಟಿಕೋತ್ಸವಕ್ಕೆ ಪರಿಗಣಿಸಲಾಗುವುದು. ಆದ್ದರಿಂದ ಈ ಮೊದಲೇ ಅರ್ಜಿಯನ್ನು ಸಲ್ಲಿಸಿದ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
- ಬಂದ ಅರ್ಜಿಗಳನ್ನು ಹಂತ ಹಂತವಾಗಿ ಜಾಲ ತಾಣದಲ್ಲಿ ಹಾಕಲಾಗುವುದು. ಯಾವುದೇ ತಿದ್ದುಪಡಿ (ಹೆಸರು, ವರ್ಗ ಇತ್ಯಾದಿ) ಇದ್ದರೆ ಕೂಡಲೇ ತಿಳಿಸಬೇಕು. ಇದರಿಂದ ಅಭ್ಯರ್ಥಿಗಳಿಗೆ ಸರಿಯಾದ ಪದವಿ ಪತ್ರ ದೊರಕುವುದು.
- ಅಂತಿಮ ಪಟ್ಟಿಯಲ್ಲಿ ಹೆಸರು/ ಹೆಸರಿನ ಅಕ್ಷರಗಳಲ್ಲಿ ಏನಾದರೂ ತಿದ್ದುಪಡೆ ಮಾಡುವುದಿದ್ದಲ್ಲಿ ಘಟಿಕೋತ್ಸವದ ಅರ್ಜಿ ಸಲ್ಲಿಸುವುದಕ್ಕಿಂತ ಮೊದಲೆ ತಿದ್ದುಪಡೆ ಮಾಡಿಕೊಳ್ಳಬೇಕು.

**ಆಜ್ಞೆಯ ಮೇರೆಗೆ,**

**ಕುಲಸಚಿವರು (ಮೌಲ್ಯಮಾಪನ)**

**ಪ್ರತಿಗಳು:**

1. ಸಂಪಾದಕರು, ಸಂಯುಕ್ತ ಕರ್ನಾಟಕ, ಕನ್ನಡ ದಿನವಹಿ ಪತ್ರಿಕೆ, ಹುಬ್ಬಳ್ಳಿ
2. ಸುದ್ದಿಗಾರರು, ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಶಾಖಾ ಅಧಿಕಾರಿಗಳು, ಹುಬ್ಬಳ್ಳಿ.
3. ಹಿಂದು ಕರೆಸ್ಪಾಂಡನ್ಸ್, 56, ಅಧ್ಯಾಪಕನಗರ, ಹುಬ್ಬಳ್ಳಿ-6.
4. ಸಂಪಾದಕರು, ವಿಜಯ ಕರ್ನಾಟಕ, ಧಾರವಾಡ.
5. ಕುಲಸಚಿವರು, ಮೈಸೂರು, ಬೆಂಗಳೂರು, ಗುಲ್ಬರ್ಗಾ, ಮಂಗಳೂರು, ಶಿವಮೊಗ್ಗ, ವಿಟಿಯು, ಬೆಳಗಾಂವ,ಧಾರವಾಡ, ವಿಶ್ವ ವಿದ್ಯಾಲಯಗಳು, ಇವರ ಮಾಹಿತಿಗಾಗಿ.
6. ಕುಲಸಚಿವರು (ಮೌಲ್ಯಮಾಪನ), ಮೈಸೂರು, ಬೆಂಗಳೂರು, ಗುಲ್ಬರ್ಗಾ, ಮಂಗಳೂರು, ಶಿವಮೊಗ್ಗ, ವಿಟಿಯು, ಧಾರವಾಡ, ಬೆಳಗಾಂವ ವಿಶ್ವ ವಿದ್ಯಾಲಯಗಳು, ಇವರ ಮಾಹಿತಿಗಾಗಿ.
7. ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲ ಪ್ರಾಚಾರ್ಯರುಗಳಿಗೆ.
8. ಹಣಕಾಸು ಅಧಿಕಾರಿಗಳು, ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿ.
9. ಅಧ್ಯಕ್ಷರು, ಸ್ನಾತಕೋತ್ತರ ವಿಭಾಗಗಳು, ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿ ಹಾಗೂ ಕ.ರಾ.ಕಾ. ವಿಶ್ವವಿದ್ಯಾಲಯದ ಸ್ನಾತಕ ಮಹಾವಿದ್ಯಾಲಯಗಳು.
10. ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿಯ ವಿದ್ಯಾರ್ಥಿನಿಲಯಗಳ ಕ್ಷೇಮಪಾಲಕರು.
11. ಡೀನ್, ವಿದ್ಯಾರ್ಥಿ ಕಲ್ಯಾಣ, ಸಿ.ಡಿ.ಸಿ ಮತ್ತು ಮುಖ್ಯಸ್ಥರುಗಳು, ಕ.ರಾ.ಕಾ.ವಿಶ್ವವಿದ್ಯಾಲಯ, ಹುಬ್ಬಳ್ಳಿ,
12. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಇವರ ಕಾರ್ಯಾಲಯ, ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರ ಮಹಿತಿಗಾಗಿ.
13. ಪರೀಕ್ಷಾ ವಿಭಾಗದ ಎಲ್ಲ ಅಧೀಕ್ಷಕರು, ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿ.
14. ಅಧೀಕ್ಷಕರು, ಶಿಷ್ಯವೇತನ ವಿಭಾಗ, ಹಣಕಾಸು ವಿಭಾಗ.
15. ಅಧೀಕ್ಷಕರು, ಖರೀದಿ ಹಾಗೂ ಸಂಗ್ರಹ ವಿಭಾಗ, ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿ.
16. ಸ್ಥಾನಿಕ ಅಭಿಯಂತರರು, ಕ.ರಾ.ಕಾ. ವಿಶ್ವವಿದ್ಯಾಲಯ, ಹುಬ್ಬಳ್ಳಿ.